ಸಾಕ್ಷಿಯನ್ನು ದಿನಾಂಕಃ **25.11.2023** ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ವಕೀಲರಿಂದ

4. ನಾನು ಪ್ರತಿವಾದ ಪತ್ರವನ್ನು ನೋಡಿದ್ದೇನೆ. ನಾನು ಕ್ರಯ ಪತ್ರವನ್ನು ನೋಡಿರುವುದಿಲ್ಲ. ದಿಃ 05.07.1965 ರ ಕ್ರಯ ಪತ್ರವನ್ನು ನಾನು ಓದಿರುವುದಿಲ್ಲ. ಕೆಂಪೇಗೌಡರವರನ್ನು ಈ ಪ್ರುಕಾರಣದಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿ. 2 ಎಕರೆ 28 ಗುಂಟೆ ಜಮೀನಿನ ಚಕ್ಕು ಬಂದಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಪತ್ರ ನೋಡಿಲ್ಲ ಎನ್ನುತ್ತಾರೆ. ಬೋರೇಗೌಡರು ಚಿಕ್ಕೋನು ಎಂಬುವವರಿಗೆ ಮಾರಾಟ ಮಾಡಿದ ಕ್ರಯ ಪತ್ರ ಕೂಡ ನಾನು ನೋಡಿಲ್ಲ. ಚಿಕ್ಕೋನುರವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ. ಸದರಿ ದಾಖಲೆಗಳನ್ನು ನೊಂದಣಿ

ಕಛೇರಿಯಿಂದ ಪಡೆದುಕೊಳ್ಳಲು ತೊಂದರೆ ಇರುವುದಿಲ್ಲ. ಪುಟ್ಟಸ್ವಾಮಿ ರವರು ಗೊತ್ತಿದ್ದಾರೆ. ಪುಟ್ಟಸ್ವಾಮಿಗೌಡರು 19 ಎಕರೆ 5 ಗುಂಟೆಯನ್ನು ಖರೀದಿ ಮಾಡಿದ್ದಾರೆ. ಅದರ ಕ್ರಯ ಪತ್ರ ನಾನು ನೋಡಿದ್ದೇನೆ. ಅದು ದಿಃ 05.09.2014 ಎಂದರೆ ಸರಿ. ಖರೀದಿ ಮಾಡಿದ ಅಸ್ತಿಯ ಚಕ್ಕುಬಂದಿ ನನಗೆ ಗೊತ್ತಿದೆ. ಪೂರ್ವಕ್ಕೆಃಶಿಂಷ ನದಿ, ಪಶ್ಚಿಮಕ್ಕೆಃಸರ್ವೆ ನಂಬರ್ 6, ಉತ್ತರಕ್ಕೆಃ ಕಿರಂಗೂರಿನ ಎಲ್ಲೆ ಅಥವಾ ಗಡಿ, ದಕ್ಷಿಣಕ್ಕೆ ಕಾರೇಗೂಟ ರವರ ಜಮೀನು. ಪುಟ್ಟಸ್ವಾಮಿ ರವರ ಕ್ರಯ ಪತ್ರವನ್ನು ನಾನು ನೋಡಿದ್ದೇನೆ. ನಾನು ಸದರಿ ಜಮೀನಿನ ಉತ್ತರಕ್ಕೆ ಇರುವ ಚಕ್ಕುಬಂದಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಉತ್ತರಕ್ಕೆ ಕೆಂಪೇಗೌಡ ಎಂದು ಬರೆದಿರುವುದು ಸುಳ್ಳಾಗಿರುತ್ತದೆ. ಪಿಡ್ಡೇಗೌಡರಿಗೆ ಕಳ್ಳಿಕೊಪ್ಪದಲ್ಲಿ 7ನೇ ಸರ್ವೆ ನಂಬರ್ ನಲ್ಲಿ ಆಸ್ತಿಗಳು ಇದ್ದವು. ಬೇರೆ ಯಾವುದೇ ಊರಿನಲ್ಲಿ ಅವರಿಗೆ ಜಮೀನು ಇರಲಿಲ್ಲ. ಅವರಿಗೆ ಕಿರಂಗೂರಿನಲ್ಲಿ ಜಮೀನು ಇತ್ತು ಎಂದರೆ ಸರಿಯಲ್ಲ. ಅವರು ಕಿರಂಗೂರಿನಲ್ಲಿ ಅವರಿಗೆ ಇದ್ದ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕೆಂಪೇಗೌಡ ಮತ್ತು ಚಿಕ್ಕೋನು ಎಂಬುವವರಿಗೆ ಸದರಿ ಜಮೀನುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಮಾಹಿತಿ ನಿಮಗೆ ಗೊತ್ತಿಲ್ಲ ನಿಮ್ಮ ತಂದೆಗೆ ಗೊತ್ತಿದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿದೆ ನಮ್ಮ ತಂದೆಗೆ ಗೊತ್ತಿಲ್ಲ ಎನ್ನುತ್ತಾರೆ. ಕಿರಂಗೂರು ಆಸ್ತಿಗಳಿಗೆ ಸಂಬಂದಿಸಿದಂತೆ ನಮ್ಮ ತಂದೆ ಯಾವುದೇ ದಾವೆಯನ್ನೂ ಮಾಡಿಲ್ಲ ಎಂದರೆ ಸರಿ. ತರೀಕೆರೆಗೂ ಮತ್ತು ಆಲೆಹಳ್ಳಿಗೂ 2 ಕಿ ಮೀ ದೂರ. ತರೀಕೆರೆಯಲ್ಲಿ ನಮ್ಮ ತಂದೆಯ ಕುಟುಂಬಕ್ಕೆ ಮತ್ತು ದೊಡ್ಡನಂಜುಂಡ ರವರಿಗೆ ಸೇರಿದ ಆಸ್ತಿಗಳು ಇವೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ತರೀಕೆರೆಯಲ್ಲಿರುವ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ತರೀಕೆರೆ ಆಸ್ತಿಗಳಿಗೆ ಸಂಬಂದಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಕೊಡುವ ಅವಶ್ಯಕತೆ ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ

ಬೋರೇಗೌಡರ ಕುಟುಂಬದವರು ಸ್ವಾಧೀನತೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಆಸ್ತಿಯಲ್ಲಿ ನಾನು ಸ್ವಾಧೀನತೆಯಲ್ಲಿ ಇಲ್ಲ ಎಂದರರೆ ಸರಿಯಲ್ಲ. ಆ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಂಜಮ್ಮನವರ 2 ನೇ ಮಗನೇ ಬೊರೇಗೌಡ ಎಂದರೆ ಸರಿ. ಸದರಿ ಬೋರೇಗೌಡರನ್ನು ಸಣ್ಣಮ್ಮನಿಗೆ ದತ್ತಕಕ್ಕೆ ಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಸಣ್ಣಮ್ಮ ನಂಜಮ್ಮನ ಕೊನೆ ತಂಗಿ ಎಂದರೆ ಸರಿ. ದಾವಾ ಅಸ್ತಿಯನ್ನು ಬೋರೇಗೌಡರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಮರಿಯಕ್ಕನವರು ಅವರಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಬೋರೇಗೌಡರೇ ಸದರಿ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಅನೇ ಕಾರಣಕ್ಕಾಗಿ ದೊಡ್ಡನಂಜುಂಡಪ್ಪನವರ ಕುಟುಂಬಸ್ಥರು ದಾವೆ ಮಾಡಿಲ್ಲ ಎಂದರೆ ಸರಿಯಲ್ಲ. ಸಣ್ಣಮ್ಮನ ಮಕ್ಕಳು ಹಾಗೂ ನಿಂಗಮ್ಮನ ಮಕ್ಕಳು ದಾವೆ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ದತ್ತಕಕ್ಕೆ ಕೊಟ್ಟಿರುವ ಕಾರಣ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 19 ಎಕರೆ 36 ಗುಂಟೆ ಜಮೀನಿನಲ್ಲಿ ಪುಟ್ಟ ಸ್ವಾಮಿಯವರು ಮಾತ್ರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಚಿಕ್ಕೋನು 2 ಎಜಕರೆ 7 ಗುಂಟೆಯಲ್ಲಿ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಮತ್ತು ಕೆಂಪೇಗೌಡರವರು 2 ಎಕರೆ 28 ಗುಂಟೆ ಜಮೀನಲ್ಲಿ ಸ್ವಾಧೀನತೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾವು ಸ್ವಾಧೀನತೆಯಲ್ಲಿ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂರದೆ ಸರಿಯಲ್ಲ.

ಪ್ರತಿವಾದಿ 2 ರಿಂದ 4, 11 ರಿಂದ 16 ರವರು ಮೇಲಿನ ಪಾಟೀ ಸವಾಲನ್ನು ಅನ್ವಯಿಸಿಕೊಂಡಿರುತ್ತಾರೆ. ಪ್ರತಿವಾದಿ 5, 18 ಮತ್ತು 19 ರವರು ಗೈರು ಹಾಜರು ಆದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. ಬಿ ಎ ಜಿ ರವರು ಸಮಯ ಕೋರಿದ್ದು, ಸಕಾರಣ ಇಲ್ಲವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.